೩ ಶ್ರೀ ಪಿ.ಎಸ್. ರಾಣೆ, ವಿಧಾನ ಸಭಾ ಸದಸ್ಯರು, ಕಾರವಾರ.
೪ ಶ್ರೀ ಅಜ್ಜೀಬಾಳ ಜಿ.ಎಸ್. ಹೆಗಡೆ, ವಿಧಾನ ಸಭಾ ಸದಸ್ಯರು, ಅಂಕೋಲಾ.
೫ ಶ್ರೀ ಎನ್.ಎಚ್. ಗೌಡಾ, ಎಂ.ಎಲ್.ಎ. ಕುವಟಾ.
೬ ಶ್ರೀ ಎಮ್.ಟಿ. ನಾಯ್ಕ ಅಧ್ಯಕ್ಷ, ನಗರ ಯೋಜನೆ, ಕಾರವಾರ.
೭ ಶ್ರೀ ಎಸ್.ಪಿ. ಕಾಮತ್, ವಕೀಲ, ಕಾರವಾರ.
೮ ಶ್ರೀ ಸಿ.ಡಿ. ಕೃಷ್ಣಾಪೂರ, ಕಾರವಾರ.
೯ ಶ್ರೀ ರಮಾನಂದ ನಾಯ್ಕ ತಾಲೂಕಾ ಜನತಾ ಪಕ್ಷದ ಅಧ್ಯಕ್ಷರು, ಅಂಕೋಲಾ.
೧೦ ಶ್ರೀ ಕಮಲಾಕರ ಗೋಕರ್ಣ, ಉಪಾಧ್ಯಕ್ಷರು, ಜನತಾ ಪಕ್ಷ, ಕಾರವಾರ.
೧೧ ಶ್ರೀ ಪಿ. ಎಮ್. ತಾಂಡೇಲ, ಬಿಣಗಾ, ಕಾರವಾರ.
೧೨ ಶ್ರೀ ಕೆ.ಕೆ. ನಾಯ್ಕ, ಭಾವಿಕೇರಿ, ಅಂಕೋಲಾ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಹದಿನಾರನೆಯ ಪಟ್ಟಿಯಲ್ಲಿರ ವ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಮುಜರಾಯಿ ಇಲಾಖೆಯಿಂದ ಹಣ ಬಿಡುಗಡೆ ಬಗ್ಗೆ.

೬೧೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಹಣ ಬಿಡುಗಡೆ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಅದನ್ನು ಯಾವ ನಿಯಮದ ಪೇರೆಗೆ ಬಿಡುಗಡೆ ಮಾಡಲಾಯಿತು.

ಇ) ತೇಗೂರು ಮಂದಿರದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿ, ಹಣ ಬಿಡುಗಡೆ ಮಾಡದಿರಲು ಕಾರಣವೇನು, ಹಾಗೂ ಇದರ ಬಗ್ಗೆ ಅನೇಕ ಮನವಿ ಕಳಿಸಿದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣಗಳೇನು.

ಈ) ಸದರಿ ಮಂದಿರದ ಜೀರ್ಣೋದ್ಧಾರಕ್ಕೆ ಬೇಗನೆ ಹಣ ಬಿಡುಗಡೆ ನೀಡಲಾಗುವುದೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಬಂದಿದೆ.

ಆ) ಈ ಬಗ್ಗೆ ನಿಯಮ ರೂಪಿಸಿಲ್ಲ.

ಇ) ತೇಗೂರು ದೇವಸ್ಥಾನಕ್ಕೆ ಜೀರ್ಣೋದ್ಧಾರಕ್ಕೆ ಸರ್ಕಾರದ ವತಿಯಿಂದ ೧೯೮೪–೮೫ನೇ ಸಾಲಿನಲ್ಲಿ ೧೫,೦೦೦–೦೦ ರೂಪಾಯಿಗಳ ಧನ ಸಹಾಯ ಬಿಡುಗಡೆ ಮಾಡಿರುತ್ತದೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಉಳಿದ ೯೫,೦೦೦–೦೦ ರೂ.ಗಳ ಧನ ಸಹಾಯವನ್ನು ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆ ಕಳಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ,

ಈ) ಈ ವಿಷಯದ ಬಗ್ಗೆ ಅಂತಿಮ ತೀರ್ಮಾನವನ್ನು ಸದ್ಯದಲ್ಲೆ ತೆಗೆದುಕೊಳ್ಳಲಾಗುವುದು.